


# ಪೋಷಕರಿಗೇ ಬೇಕು ಪಾಠ

ಇಡೀ ಸಮಾಜವೇ ಮಸುಕು ಮಸುಕಾದ ದಾರಿಯಲ್ಲಿ ಸಾಗುತ್ತಿದೆಯೇ, ಇಂದಿನ ಇಡೀ ಪೀಳಿಗೆಯೇ ದಾರಿ ಕಾಣದೇ ಇಳಿಜಾರು ಕಂಡಲ್ಲಿ ಜರಿದು ಹೋಗುತ್ತಿದೆಯೇ, ತಮ್ಮದೇ ಹಳವಂಡಗಳಲ್ಲಿ ಮುಳುಗಿ ಹೋಗಿರುವ ಇವತ್ತಿನ ಪೋಷಕರು ಮಕ್ಕಳಿಗೆ ಸರಿದಾರಿ ತೋರಿಸುವುದರಲ್ಲಿ ಸೋಲುತ್ತಿದ್ದಾರೆಯೇ, ಎಳೆ ಮನಸುಗಳು ಸರಿಯಾದ ದಿಕ್ಕಿನೆಡೆಗೆ ಸಾಗುವಂತಹ ಶಿಕ್ಷಣ ಕೊಡುವಲ್ಲಿ ಶಿಕ್ಷಣ ಸಂಸ್ಥೆಗಳು ಹಿಂದೆ ಬೀಳುತ್ತಿವೆಯೇ, ಅವರಿಗೆ ಸಿಗುತ್ತಿರುವ ಗ್ಯಾಜೆಟ್‌ಗಳು, ಜಾಲತಾಣಗಳು, ಅಲ್ಲಿ ಲಭ್ಯವಾಗುತ್ತಿರುವ ಮಾಹಿತಿ, ಅತಿಯಾದ ಸೌಲಭ್ಯಗಳು, ಅವಕಾಶಗಳು, ಅತಿರೇಕದ ಅನುಕೂಲಗಳು... ಇವೆಲ್ಲಾ ಒಟ್ಟಾಗಿ ಮಕ್ಕಳನ್ನು ತಳವಿಲ್ಲದ ಪಾತಾಳಕ್ಕೆ ನೂಕುತ್ತಿವೆಯೇ? ಪ್ರಶ್ನೆಗಳು ಇಡೀ ಸಮಾಜವನ್ನು ದಿಗ್ಭ್ರಾಂತಗೊಳಿಸಿವೆ. ಮತ್ತು ಮಕ್ಕಳಿಗೆ ನೀಡಬೇಕೆಂದಿರುವ ಲೈಂಗಿಕ ಶಿಕ್ಷಣದಲ್ಲಿ ಏನೆಲ್ಲಾ ಒಳಗೊಂಡಿರಬೇಕು, ಹೇಗೆ ಮಕ್ಕಳೊಂದಿಗೆ ಈ ವಿಚಾರವನ್ನು ಪ್ರಸ್ತಾಪಿಸಬೇಕು ಎನ್ನುವುದರ ಮೇಲೆ ಈ ಎಲ್ಲಾ ಪ್ರಶ್ನೆಗಳ ಉತ್ತರ ನಿಂತಿವೆ.

### ಮುಕ್ತ ವಾತಾವರಣವಿರಲಿ

ಯಾವುದೊ ಅಹಿತಕರ ಘಟನೆ, ಆತಂಕದ ಸ್ಥಿತಿ, ಅವರ್ಣನೀಯ ಅನುಭವ ಅಥವಾ ಎಂಥದೊ ಗೊಂದಲದ ದಾರಿಯಲ್ಲಿ ನಿಂತಾಗ ಎಷ್ಟು ಮಕ್ಕಳು ಪೋಷಕರ ಎದುರು ಅದನ್ನು ಹಂಚಿಕೊಳ್ಳುತ್ತಾರೆ? ಎಷ್ಟು ಮನೆಗಳಲ್ಲಿ ಇಂತಹ ವಾತಾವರಣವನ್ನು ಕಲ್ಪಿಸಿದ್ದೇವೆ? ಲೈಂಗಿಕ ವಿಚಾರ ಬಂದಾಗ, ಅದು ಹೊರಗಿನ ಒತ್ತಾಯ ಅಥವಾ ಒತ್ತಡವೇ ಆಗಿರಲಿ, ತಮ್ಮದೇ ಭಾವನಾತ್ಮಕ ಇಂಗಿತವೇ ಆಗಿರಲಿ ತಮ್ಮೊಳಗೇ ತಾವು ಒಮ್ಮೆ ಆತ್ಮಾವಲೋಕನ



### ಬದುಕನ್ನು ಜಯಿಸುವುದನ್ನು ಕಲಿಸೋಣ

- ನಿಮ್ಮ ದೇಹ ಹಾಗೂ ಮನಸು ಬಹು ಅಮೂಲ್ಯ. ಅದು ನಿಮ್ಮ ಘನತೆ, ನಿಮ್ಮ ಹಕ್ಕು, ಹೇಗೆಂದರೆ ಹಾಗೆ, ಎಲ್ಲೆಂದರೆ ಅಲ್ಲಿ, ಯಾರೆಂದರೆ ಅವರು ನಿಮ್ಮ ದೇಹ ಅಥವಾ ಮನಸಿನ ಮೇಲೆ ಹಿಡಿತ ಸಾಧಿಸಲು, ಬಳಸಿಕೊಳ್ಳಲು ಅವಕಾಶ ಕೊಡಬೇಡಿ.
- ಅಪಾತ್ರರಿಗೆ, ಅವಸರಕ್ಕೆ, ಕುತೂಹಲಕ್ಕೆ, ಒತ್ತಾಯಕ್ಕೆ ಮಣಿಯಬೇಡಿ.
- ನಿಮ್ಮ ದೇಹವನ್ನು ಮನಸನ್ನು ನೀವು ಪ್ರೀತಿಸಬೇಕು, ಗೌರವಿಸಬೇಕು.
- ನಿಮ್ಮನ್ನು ನೀವು ಶೋಷಣೆಗೆ, ದುರ್ಬಳಕೆಗೆ ಒಡ್ಡಿಕೊಳ್ಳಬಾರದು. ಅಂತಹ ಸಂದರ್ಭಗಳು ಎದುರಾದಾಗ ಗಟ್ಟಿಯಾಗಿ, ಜೋರಾಗಿ ಪ್ರತಿಭಟಿಸುವ, ಪ್ರಶ್ನಿಸುವ, ತಡೆಯುವ, ಪಾರಾಗುವ ದಿಟ್ಟತನವನ್ನು ಬೆಳೆಸಿಕೊಳ್ಳಲೇಬೇಕು.
- ಮನಸು ದುರ್ಬಲವಾದಲ್ಲಿ, ನಿರ್ಧಾರ ಕಠಿಣವಾದಲ್ಲಿ, ಏನೂ ತೋಚುತ್ತಿಲ್ಲ ಅಂತನಿಸಿದಲ್ಲಿ ನಿಮ್ಮವರೊಂದಿಗೆ, ನಿಮ್ಮ ಪಾಲಕರೊ, ಸ್ನೇಹಿತರೊ, ಬಂಧುಗಳೊ... ತುಂಬಾ ವಿಶ್ವಾಸವಿರುವವರೊಂದಿಗೆ ಮಾತಾಡಿ.

